ಈ) ಡಂಕಲ್ ಪ್ರಸ್ತಾವನೆಯಲ್ಲಿ ಭಾರತ ಕೃಷಿ ನೀತಿ ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಸ್ವತಂತ್ರ ಹಾಗೂ ಹೊಂದಿಸಿಕೊಳ್ಳಲು ಧಕ್ಕೆಯಾಗುವಂತ ಯಾವುದೇ ನಿಬಂಧನೆಗಳು ಇರುವುದಿಲ್ಲ.

**ಎಲ್.ಓ.ಸಿ. ಹಣ ಬಿಡುಗಡೆ**

552 - ಶ್ರೀ ಬಾಬುರಾವ್ ಚವಾಣ್ (ಶಹಬಾದ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಜಿಲ್ಲಾ ಪರಿಷತ್ತಿನಲ್ಲಿ ಬರುತ್ತಿರುವ ಎಲ್.ಓ.ಸಿ. ಹಣ (ಎಂ.ಎನ್.ಪಿ) ಅಥವಾ 20 ಜೆ.ಆರ್.ವೈ ಹಾಗೂ ಇನ್ನಿತರ ಹಣವು ಮತ ಕ್ಷೇತ್ರವಾರು ಬಿಡುಗಡೆ ಮಾಡಲಾಗುವುದೇ ಅಥವಾ ತಾಲ್ಲೂಕುವಾರು ಬಿಡುಗಡೆ ಮಾಡಲಾಗುವುದೇ?*

*ಆ) ಕೆಲವು ತಾಲ್ಲೂಕುಗಳಲ್ಲಿ ನಾಲ್ಕು ಶಾಸಕರು ಇರುವುದರಿಂದ ಒಬ್ಬ ಶಾಸಕರಿಗೆ ಅಧಿಕಾರಿಗಳು ಮಲತಾಯಿ ಧೋರಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಇ) ಹಾಗಿದ್ದಲ್ಲಿ ಸಮನಾಗಿ ಎಲ್.ಓ.ಸಿ. ಹಂಚಲು ಸರ್ಕಾರದ ನಿಯಮಗಳೇನು?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಜಿಲ್ಲಾ ಪಂಚಾಯತ್ನಿಂದ ಎಂ.ಎನ್.ಪಿ ಮತ್ತು ಶೇ. 20ರಷ್ಟು ಜ.ರೋ.ಯೇ. ಅಡಿಯಲ್ಲಿ ಶಿಫಾರಸ್ಸಾಗಿರುವ ಅನುದಾನದ ಹಣವನ್ನು ಶೀರ್ಷಿಕೆವಾರು ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳಿಗೆ ಈ ಕಾರ್ಯಕ್ರಮಗಳಿಗಾಗಿ ಒಪ್ಪಿಗೆಯಾಗಿರುವ ಕ್ರಿಯಾ ಯೋಜನೆಯ ಪ್ರಕಾರ ಅವಶ್ಯಕತೆ ಮತ್ತು ಆದ್ಯತೆ ಮೇರೆಗೆ ಬಿಡುಗಡೆ ಮಾಡಲಾಗುವುದು. ತಾಲ್ಲೂಕುವಾರು ಅಥವಾ ಮತಕ್ಷೇತ್ರವಾರು ಬಿಡುಗಡೆ ಮಾಡುವುದಿಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

**ಬೀದರ್ ಸಾಲಗಳ ಜಿಲ್ಲೆಯಲ್ಲಿ ಮೇಲಿನ ಸುಸ್ತಿ ಬಡ್ಡಿ ಮನ್ನಾ**

632 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಬೀದರ್ ಜಿಲ್ಲೆಯಲ್ಲಿ ರೈತರು ತೆಗೆದುಕೊಂಡಿರುವ ಸಹಕಾರ ಬ್ಯಾಂಕುಗಳಲ್ಲಿನ ಸಾಲದ ಸುಸ್ತಿ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಿದೆಯೇ?*

*ಆ) ಹಾಗಿದ್ದಲ್ಲಿ ಬೀದರ್ ಜಿಲ್ಲೆಯಲ್ಲಿ ಇತ್ತೀಚೆಗೆ ಭೂಕಂಪ ಸಂಭವಿಸಿದ್ದರಿಂದ ರೈತರಿಗೆ ಅಪಾರ ಹಾನಿಯುಂಟಾಗಿರುವುದರಿಂದ ಬೀದರ್ ಜಿಲ್ಲೆಯ ಎಲ್ಲಾ ರೈತರ ಸಾಲದ ಬಡ್ಡಿಯನ್ನು ಮನ್ನಾ ಮಾಡಲು ಸರ್ಕಾರ ಆಲೋಚಿಸುತ್ತಿದೆಯೇ?*

*ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವಾಗ ನಿರ್ಧಾರ ಕೈಗೊಳ್ಳುವುದು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ)1-7-1993 ರಿಂದ 31-3-1994 ರ ಒಳಗೆ ರಾಜ್ಯದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ಬಡ್ಡಿಯೊಂದಿಗೆ ಪೂರ್ತಿಯಾಗಿ ಅಸಲನ್ನು ಮರುಪಾವತಿ ಮಾಡಿದ ರೈತರ ಸಾಲದ ಮೇಲಿನ ಸುಸ್ತಿ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಿದೆ.

ಆ) ಇಲ್ಲ.